# ಪ್ರಾದೇಶಿಕ ರಾಜರ ಕೊಡುಗೆ ಅನನ್ಯ: ಸ್ವರ್ಣವಲ್ಲೀ ಶ್ರೀ

ಪ್ರಜಾವಾಣಿ ವಾರ್ತೆ



ಶಿರಸಿಯ ಸ್ವಾದಿ ಜೈನಮಠದಲ್ಲಿ ಆಯೋಜಿಸಿದ್ದ ಸೋಂದಾ ಇತಿಹಾಸೋತ್ಸವವನ್ನು ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಉದ್ಘಾಟಿಸಿದರು

ಶಿರಸಿ: 'ಸಾಮ್ರಾಜ್ಯ ವಿಸ್ತರಣೆ ಎಲ್ಲ ರಾಜರ ಆಸಕ್ತಿಯಾದರೆ ಸಾಹಿತ್ಯ, ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದು ಪ್ರಾದೇಶಿಕ ರಾಜ ಮನೆತನಗಳು. ಈ ನಿಟ್ಟಿನಲ್ಲಿ ಪ್ರಾದೇಶಿಕ ರಾಜ ಮನೆತನಗಳ ಸಮಗ್ರ ಹಾಗೂ ನೈಜ ಇತಿಹಾಸ ಬೆಳಕಿಗೆ ಬಂದರೆ ಹೊಸ ಇತಿಹಾಸ ಸೃಷ್ಟಿಯಾಗುತ್ತದೆ' ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಸ್ವಾದಿ ಜೈನ ಮಠದಲ್ಲಿ ಆಯೋಜನೆಗೊಂಡ ಎರಡು ದಿನಗಳ ರಾಜ್ಯಮಟ್ಟದ 'ಸೋಂದಾ ಇತಿಹಾಸೋತ್ಸವ'ವನ್ನು ಶನಿವಾರ ಉದ್ಘಾಟಿಸಿ, ಸೋದೆ ಸದಾಶಿವರಾಯ ಪ್ರಶಸ್ತಿಯನ್ನು ಡಿ.ವಿ.ಪರಮಶಿವಮೂರ್ತಿ ಅವರಿಗೆ ಪ್ರದಾನ ಮಾಡಿ ಅವರು ಆಶೀರ್ವದಿಸಿದರು.

'ಇತಿಹಾಸ ಕ್ಷೇತ್ರದಲ್ಲೂ ಹೊಸ ಸಂಶೋಧನೆಗಳು ಆಗುತ್ತದೆ. ಪ್ರತಿ ಸಂಶೋಧನೆಯಲ್ಲೂ ಹೊಸ ಇತಿಹಾಸ ಸೃಷ್ಟಿಯಾಗುತ್ತದೆ. ಪ್ರಾದೇಶಿಕ ರಾಜರ ಕೊಡುಗೆ ಇತಿಹಾಸದಲ್ಲಿ ಸಾಕಷ್ಟಿದೆ. ಪ್ರಾದೇಶಿಕವಾಗಿ ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ಸಾಮಾಜಿಕವಾಗಿ ಕೊಡುಗೆ ನೀಡಿರುವ ರಾಜ ಮನೆತನಗಳ ಬಗೆಗೂ ಸಂಶೋಧನೆ ಹೆಚ್ಚಬೇಕು. ಆ ಮೂಲಕ ಈ ಹಿಂದಿನ ಇತಿಹಾಸ ಪರಿಷ್ಕರಣೆ ಆಗಬೇಕು' ಎಂದರು.

ಸ್ವಾದಿ ಜೈನ ಮಠದ ಭಟ್ಟಾಕಲಂಕ ಭಟ್ಟಾರಕ ಸ್ವಾಮೀಜಿ ಮಾತನಾಡಿ, 'ಇತಿಹಾಸ ತಿಳಿಯುವ ಜತೆ ಭವಿಷ್ಯದ ಪೀಳಿಗೆಗೆ ಇತಿಹಾಸವಾಗುವ ನಮ್ಮ ವರ್ತಮಾನವನ್ನು ಉತ್ತಮವಾಗಿ ಕಟ್ಟಿಕೊಡಬೇಕು' ಎಂದರು.

ಬೆಂಗಳೂರು ಮಿಥಿಕ್ ಸೊಸೈಟಿ ಉಪಾಧ್ಯಕ್ಷೆ ವಿ. ಅನುರಾಧಾ ಮಾತನಾಡಿ, 'ರಾಜ್ಯದಲ್ಲಿ ಲಭ್ಯ ಇರುವ ಶಿಲಾ ಶಾಸನಗಳನ್ನು, ತಾಳೆಗರಿ ಬರಹಗಳನ್ನು ಡಿಜಿಟಲೀಕರಣ ಮಾಡಿ ರಕ್ಷಿಸುವ ಕೆಲಸ ಮಿಥಿಕ್ ಸೊಸೈಟಿ ಮಾಡುತ್ತಿದೆ. ಇತಿಹಾಸದ ಪುಟಗಳ ರಕ್ಷಿಸಲು ಯಾವ ಸಂಘಟನೆಗಳು ಮುಂದಾದರೂ ಸೊಸೈಟಿ ಅವರ ಸಹಕಾರಕ್ಕೆ ನಿಲ್ಲುತ್ತದೆ' ಎಂದರು.

ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದ ಇತಿಹಾಸ ತಜ್ಞ ಪ್ರೊ.ರಾಜಾರಾಮ ಹೆಗಡೆ ಮಾತನಾಡಿದರು.

ಸಮ್ಮೇಳನದಲ್ಲಿ 'ಕರ್ನಾಟಕ ಇತಿಹಾಸದ ರಚನೆಯಲ್ಲಿ ಪ್ರಾದೇಶಿಕ ಅರಸು ಮನೆತನಗಳ ಪಾತ್ರ'ದ ಕುರಿತು ವಿಚಾರ ಸಂಕಿರಣ, ಸಾಂಸ್ಕೃತಿಕ ವೈಭವದ ಭಾಗವಾಗಿ 'ಉನ್ಮತ್ತ ಕೀಚಕ' ಯಕ್ಷ ನೃತ್ಯ ರೂಪಕ, ಯೋಗ ವಿಸ್ಮಯ ಕಾರ್ಯಕ್ರಮಗಳು ನಡೆದವು.

ಸೋದೆ ಅರಸು ಮನೆತನದ ಮಧುಲಿಂಗ ನಾಗೇಶರಾಜೇಂದ್ರ ಒಡೆಯರ್, ಹೆಂಜೆನಾಯಕ ವಂಶಸ್ಥರಾದ ಜಯಾನಂದ ಮೇತ್ರಿ, ರಾಜ್ಯ ಮಾಹಿತಿ ಹಕ್ಕು ಆಯೋಗದ ಆಯುಕ್ತ ರವೀಂದ್ರ ಧಾಕಪ್ಪ, ಪ್ರಮುಖರಾದ ವಿ.ಎನ್.ಹೆಗಡೆ ಬೊಮ್ನಳ್ಳಿ, ರತ್ನಾಕರ ಬಾಡಲಕೊಪ್ಪ, ಸುರೇಶಾ ಸೂರ್ಯವಂಶಿ ಇತರರಿದ್ದರು.

ಇತಿಹಾಸಕಾರ ಲಕ್ಷ್ಮೀಶ ಹೆಗಡೆ ಸೋಂದಾ ಪ್ರಾಸ್ತಾವಿಕ ಮಾತನಾಡಿದರು. ದಿವ್ಯಾ ಲಕ್ಷ್ಮೀಶ ಪ್ರಾರ್ಥಿಸಿದರು.